<u>ಪ್ರಧಾನ ನ್ಯಾಯಾದೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕುಂದಾಪುರ</u>

ಸಿಸಿ ನಂಬ್ರಃ 346/24
ಸಿಡಬ್ಲ್ಯೂ- 9
ಪಿಡಬ್ಲ್ಯೂ- 9

| | | |
|---|---|---|
| ಸಾಕ್ಷಿದಾರರ ಹೆಸರು | : | ಡಾ.ಸುಧಾಕರ ಟಿ |
| ತಂದೆಯ ಹೆಸರು | : | ಲೇಟ್ ಸುಬ್ರಾಯ ಟಿ |
| ಪ್ರಾಯ | : | 59 ವರ್ಷ |
| ಉದ್ಯೋಗ | : | ವೈದ್ಯಾಧಿಕಾರಿ, ವೆನ್ ಲಾಕ್ ಆಸ್ಪತ್ರೆ ಮಂಗಳೂರು |
| ವಾಸ | : | ಮಂಗಳೂರು |

ದಿನಾಂಕಃ **16-03-2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ</u>

ನಾನು 2008 ರಿಂದ ಇಲ್ಲಿಯವರೆಗೆ ವೆನ್ ಲಾಕ್ ಆಸ್ಪತ್ರೆ ಮಂಗಳೂರಿನಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 27-10-2015 ರಂದು ವಲ್ಲಿಯಮ್ಮ ಎಂಬುವವರು ಬೆಳಿಗ್ಗೆ 9.30 ಗಂಟೆಗೆ ಹಲ್ಲೆಯ ಸಂಬಂಧ ನಮ್ಮ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಾಗಿದ್ದು ನಾನು ಅವರನ್ನು ಪರಿಕ್ಷಿಸಿದಾಗ ಎದೆಯ ಎಡಭಾಗದಲ್ಲಿ ನೋವು ಇದೆ ಎಂದು ಹೇಳಿರುತ್ತಾರೆ. ಕುತ್ತಿಗೆಯ ಭಾಗದಲ್ಲಿ ನೋವು ಇದೆ ಎಂದು ಹೇಳಿರುತ್ತಾರೆ. ಎಡಗೈಯ ತೋರುಬೆರಳಿನಲ್ಲಿ ಊದಿದ ಗಾಯ ಆಗಿತ್ತು. ಅವರನ್ನು ಇ ಎನ್ ಟಿ ಹಾಗೂ ಸರ್ಜರಿಗೆ ರೆಫರ್ ಮಾಡಿರುತ್ತೇನೆ.

ನನ್ನ ಅಭಿಪ್ರಾಯದಂತೆ ಮೇಲೆ ಹೇಳಿದ ಗಾಯಗಳು ಸಾಮಾನ್ಯ ಸ್ವರೂಪದ ಗಾಯ ಆಗಿದ್ದು ವೈದ್ಯಕೀಯ ಪ್ರಮಾಣ ಪತ್ರವನ್ನು ಕೊಟ್ಟಿರುತ್ತೇನೆ. ಸಾಕ್ಷಿ ವೈದ್ಯಕೀಯ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ. 7 ಎಂದು, ಸಹಿಯನ್ನು ನಿ.ಪಿ. 7(ಎ) ಎಂದು ಗುರುತಿಸಲಾಯಿತು.

<u>ಪಾಟಿ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಯು ಆರ್ ಎಸ್ ವಕೀಲರಿಂದ</u>

1. ನಮ್ಮ ಆಸ್ಪತ್ರೆಗೆ ಬರುವ ಪೂರ್ವದಲ್ಲಿ ಆ ಮಹಿಳೆ ಕುಂದಾಪುರದ ಸರ್ಕಾರಿ ಆಸ್ಪತ್ರೆಗೆ ಹಾಗೂ ಉಡುಪಿಯ ಜಿಲ್ಲಾ ಆಸ್ಪತ್ರೆಗೆ ದಾಖಲಾಗಿ ಬಂದಿದ್ದರು. ಗಾಯದ ಪ್ರಮಾಣ ಪತ್ರದಲ್ಲಿ ಗಾಯದ ವಯಸ್ಸನ್ನು ನಮೂದಿಸಿರುವುದಿಲ್ಲ ಎಂದರೆ ಸರಿ. ಕುಂದಾಪುರದ ಸರ್ಕಾರಿ ಆಸ್ಪತ್ರೆದಿಂದ ಯಾವಾಗ ಡಿಸ್ಚಾರ್ಜ್ ಆಗಿ ಬಂದಿರುತ್ತಾರೆ ಎಂದರೆ ಸಾಕ್ಷಿ ದಿನಾಂಕ 19-10-2015 ರಂದು ಬಿಡುಗಡೆ ಆಗಿ

ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಕುಂದಾಪುರದ ಸರ್ಕಾರಿ ಆಸ್ಪತ್ರೆಯಿಂದ ಬಿಡುಗಡೆಯಾಗಿ ಮನೆಗೆ ಹೋಗಿರುತ್ತಾರೆ ಎಂಬುದರ ಬಗ್ಗೆ ಮಾಹಿತಿ ಇರುವುದಿಲ್ಲ. ನಿ.ಪಿ.7 ರಲ್ಲಿ ನಮೂದಿಸಿರುವ ಗಾಯಗಳು ವಯಸ್ಸಿನ ಹಿನ್ನಲೆಯಲ್ಲಿ ಗಟ್ಟಿಯಾದ ನೆಲದ ಮೇಲೆ ಬಿದ್ದರೆ ಆಗುವ ಸಂಭವ ಇರುತ್ತದೆ ಎಂದರೆ ಸರಿ.

<u>ಮರು ವಿಚಾರಣೆಃ ಇಲ್ಲ</u>

ಓದಿ ಹೇ. ಕೇ. ಸರಿ ಇದೆ.

ನನ್ನ ಹೇ. ಮೇ. ಬೆ. ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ